Regd No B G 182 | Jai Gomata ಗೋಮಾತಾಕೀ ಜೈ | Monthly ಮಾಸಪತ್ರಿಕೆ | March 1972 ಮಾರ್ಚ್

ಗೋರಕ್ಷಣಕ್ಕೆ ಲೇಖನ ಕೊಡುತ್ತಿರುವವರಿಗೆ, ನೆರವು (ಡೊನೇಷನ್) ನೀಡುತ್ತಿರುವವರಿಗೆ; ಪ್ರಚಾರಮಾಡುತ್ತಿರುವವರಿಗೆ ವಂದನೆಗಳು
ಅನೇಕ ಪ್ರತಿಗಳು ಉಚಿತವಾಗಿ ಹಂಚಲಾಗುತ್ತಿದೆ
ವಾರ್ಷಿಕ ಚಂದಾ ಅಂಚೆ ಸೂಲ್ಕ 80ಪೈಸೆ
ವಿನಂತಿ– ಸಕಲರೀತಿಯಲ್ಲೂ ನೆರವುನೀಡಿ

ಗೋರಕ್ಷಣ
GORAKSHANA

Office– 1067 Chamarajapuram Mysore 4

Please help in every way
This Humanitarian
– Propaganda Paper –
Many Papers Distributed Free
ಗೋರಕ್ಷಣಾ, ಅಹಿಂಸಾ ಪ್ರಚಾರ ಪತ್ರಿಕೆ
ದೇಶಾದ್ಯಂತ ಗೋವಧೆ ಕೂಡಲೆ ನಿಲ್ಲಲಿ

ವರ್ಷ 22 nd Year | ಸಂಪಾದಕರು : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ | ಬಿಡಿ ಪ್ರತಿ ೧೫ ಪೈಸೆ

Cow Slaughter should be banned Immediately

ಅತ್ಯುತ್ತಮ ಅವಕಾಶ

[ಶ್ರೀ ಶಿವಶಂಕರ]

ಇಂದಿರಾಜಿಯವರ ಇಚ್ಛೆ ನೆರವೇರಿತು. ಇನ್ನು ಅವರಿಗೆ ಅದೆಲ್ಲೂ ಅಡೆತಡೆ ಇಲ್ಲ ಹೆಚ್ಚಿನ ರಾಜ್ಯಗಳಲ್ಲಿ ಸುಭದ್ರ ಸರಕಾರಗಳು ಅಸ್ತಿತ್ವಕ್ಕೆ ಒಂದಿವೆ ಮಂತ್ರಿ ಮಂಡಲ ಉರುಳಾಟ – ಪಕ್ಷಾಂತರ ಪಿಡುಗಿಗೆ ಅವಕಾಶ ಇಲ್ಲದಂತಾಗಿದೆ : ಇದರ ಪರಿಣಾಮವಾಗಿ ರಾಜ್ಯಸಭೆಯಲ್ಲೂ ಕಾಂಗ್ರೆಸ್ಸಿಗೇನೇ ಬಹುಸಂಖ್ಯೆ ಬರಲಿಕ್ಕಿದೆ ; ಅಂದರೆ ಇಂದಿರಾಜಿಯವರಿಗೆ ಅತ್ಯುತ್ತಮ ಅವಕಾಶ ಸಿಕ್ಕಿದೆ

ಹಿಂದೆ ಅವರು ಧರ್ಮನಿರೋಧಿ, ರಾಷ್ಟ್ರಘಾತುಕ, ಛಿದ್ರಮನೋವೃತ್ತಿಯ, ಮುಸ್ಲಿಂ ಲೀಗ್, ಕಮ್ಯೂನಿಸ್ಟ್ ಪಾರ್ಟಿ, ಡ್ರಾವಿಡ ಮುನ್ನೇತ್ರ ಕಳ್ಳಗಂ ಮುಂತಾದ ಪಕ್ಷಗಳ ಕರುಣೆಗಾಗಿ ಕಾಯಬೇಕಾಗಿತ್ತು. ಮುಸ್ಲಿಂಲೀಗು ಮುನಿದುಕೊಂಡಿತು, ಕಮ್ಯೂನಿಸ್ಟು ಪಾರ್ಟಿ ಅವರೊಂದಿಗೆ ಕೂಡಿಕೊಂಡಿತಾದರೂ ಆ ಯುತಿಗಲ್ಲು ತನ್ನ ಪಾರ್ಟಿಗೆ ಮತದಾನವೆಂದು ಇಂದಿರಾಜಿ ಸ್ಪಷ್ಟಪಡಿಸಿದರು ದ್ರಾ.ಮು.ಕ ದುಡುಕಿತು. ಈಗ ಅವರಿಗೆ ಈ ಪಕ್ಷಗಳ ಬಂಧನವಿಲ್ಲ. ಅವರು ಸ್ವತಂತ್ರವಾಗಿ ಈಗ ನಿರ್ಣಯಕ್ಕೆ ಬರಬಹುದು

ಇದಕ್ಕೆ ಜನತೆ ಅಂದರೆ ಮತದಾನದ ಫಲಿತಾಂಶ ಮಾರ್ಗ ಮಾಡಿಕೊಟ್ಟಿದೆ ; ಕಾಮಧೇನು ವಿಜಯ ಚಿಹ್ನೆಯಾಗಿ ನಿಂತಿದೆ ; ಅದರ ಕೊಲೆಯಂದರೆ ಅದನ್ನು ಗುರುತನ್ನಾಗಿ ಉಪಯೋಗಿಸಿದವರ ಅಪಮಾನ, ಹಾಗೇನೇ ಗುರುತನ್ನಾಗಿ ಉಪಯೋಗಿಸಿಕೊಂಡವರು ಅದಕ್ಕೆ ಮಾಡಿದ ಕೃತಘ್ನತೆ. ಇದುವರೆಗೆ ದೇಶದ್ರೋಹಿಗಳೂ ಧರ್ಮನಾಶಕರೂ ಇಂದಿರಾಜಿಯವರಿಗೆ ಅಡ್ಡವಾಗಿ ಬಂದಿರಬಹುದು ; ಈಗ ಹಾಗಲ್ಲ ; ಕಾಮಧೇನು ಗುರುತು ಸಿದ್ದು ಬಿಟ್ಟಿದೆ

ತಾನಿಟ್ಟಿಸಿದ ಫಲಿತಾಂಶ ಬಿಂದಮೇಲೆ ಜನತೆಯ ಬೇಡಿಕೆಯನ್ನು, ಜಯಕೆಯನ್ನು ಪೂರ್ತಿಗೊಳಿಸುವುದು ನ್ಯಾಯವೇ ಇದೆ ; ಅದಕ್ಕೆ ತಪ್ಪಿನಡೆದರೆ ಮೈಚ್ಚನಾ ಜಗದೀಶನು. ಏಳು ಮಲೆಗಳ ಮೇಲಿರುವ ಗೋವಿಂದನೆ ದರ್ಶನಕ್ಕೆ ಬಂದಿದ್ದ ಇಂದಿರಾಜೀಯವರಿಗೆ ಗೋವಿನ ಆಕ್ರಂದನ, ಗೋಳನ್ನು ನಿಲ್ಲಿಸುವಂತೆ ವೆಂಕಟರಮಣನೂ ಪ್ರೇರಣೆಯ ಮಾರ್ಗದರ್ಶನೂ ಮಾಡಿರಬಹುದು.

ಅಂತೆಯೇ ಅತ್ಯುತ್ತಮ ಅವಕಾಶವಿದು — ಗೋವಧೆ ತಡೆಯಲು.

★

ಆಕಾಶವಾಣಿಯಲ್ಲಿ ಗೋಮಾಂಸ !

ದಿಲ್ಲಿ : " ನನ್ನ ರಾಜ್ಯ (ಕೇರಳ) ದಲ್ಲಿ ಮಾತ್ರ ಆಕಾಶವಾಣಿಯು ಪ್ರತಿದಿನ ಗೋಮಾಂಸ ಧಾರಣೆಯನ್ನು ಬಿತ್ತರಿಸುತ್ತಿದೆ ; ಆದರೆ ಇದುವರೆಗೂ ಯಾವ ಹಿಂದುವೂ ಆಕ್ಷೇಪಿಸಿಲ್ಲ " ಎಂದು ಮುಸ್ಲಿಂ ಲೀಗ್ ನಾಯಕ, ಕೇರಳ ಶಿಕ್ಷಣ ಸಚಿವ ಶ್ರೀ ಮಹಮದ್ ಕೋಯಾ ದಿಲ್ಲಿಯ ಉರ್ದೂ ಮಾಸಪತ್ರಿಕೆ " ಮೆಹರಾಬ್ " (ಡಿ. 71) ಗತ್ತ ವಿಶೇಷ ಸಂದರ್ಶನದಲ್ಲಿ ತಿಳಿಸಿದ್ದಾರೆ. (ವಿಕ್ರಮ)

●

ಪ್ರಾಣಿವಧೆ ಪ್ರತಿಬಂಧಕಕ್ಕೆ ಮನವಿ

ಕರ್ನೂಲು — ತಾ॥ 27 ರಂದು ಮಹಾವೀರಸ್ವಾಮಿ ಜನ್ಮದಿನೋತ್ಸವದಂದು ಪ್ರಾಣಿವಧೆ ಪ್ರತಿಬಂಧಿಸಬೇಕೆಂದು ಕೇಂದ್ರವನ್ನು ಇಲ್ಲಿಯ ಜೈನಸಂಘ ಒತ್ತಾಯ ಮಾಡಿದೆ.

Sacha Ashram, Allahabad

In the holy city of Allahabad for the last 12 years An Akhand Kirtan is being performed at Sri Sacha Ashram which is located on the Banks of Ganges just opposite the Triveni Sangam.

It is a belief of Sant Sri Sacha Baba that Mahamaya who draws, by force even the minds of Jnanis and creates Illusion can be made to enlighten Man. Maharaj Ji through his personal Sadhana is engaged in the transformation of the very nature of Mahamaya and this Akhand Kirtan is a part of this momentus effort.

With this view, on this occasion of Poorna-ahooti of the Akhand Kirtan which started in in 1960, a Mahayaga [Laksh Chandi Mahayaga and Ved Parayana of all Four Vedas] has been arranged from 14 th May to 28 th May 1972. In addision a programme of (several) seminars like Vedic Goshti Viswa Asthic Sammelan, Sahityakar Goshti, Shiksha Goshti, Patrakar Goshti, Vidwat Goshti Sangeet Sammelan Goshti etc.

●

ಇದಕ್ಕೂ ಪರೀಕ್ಷೆ

ಸ್ಟಟ್‌ಗಾರ್ಟ್ (ಡಾಡ್) — ಫೆಡರಲ್ ರಿಪಬ್ಲಿಕ್ ಜರ್ಮನಿಯ ಸ್ಟಟ್‌ಗಾರ್ಟ್‌ನ್ನು ಗಾಲಯದಲ್ಲಿನ ಪ್ರಾಣಿ ರಕ್ಷಣಾ ವಿಭಾಗಳಲ್ಲಿನ ಕೆಲಕ್ಕೆ ಪ್ರತ್ಯೇಕವಾದ ತರಬೇತು ಮತ್ತು ಪರೀಕ್ಷೆಯೂ ಸಹ ಇರುತ್ತದೆ

ಲಂಡನ್ ವೆಜಿಟೇರಿಯನ್ ಸೊಸೈಟಿ

[ಮುಂದುವರಿದುದು]

ಪ್ರ— ಗ್ರಾಮೋದ್ಧಾರವಾಗಲು ಏನು ಮಾಡಬೇಕು ?

ಉ— ಪಟ್ಟಣವಾಸಿಗಳು ಮಾಂಸಾಹಾರವನ್ನು ತ್ಯಜಿಸಬೇಕು : ಆಗ ಮೂಕ ಪ್ರಾಣಿಗಳು ಪಟ್ಟಣಗಳಲ್ಲಿ ವಧೆಯಾಗುವುದಕ್ಕೆ ಪ್ರತಿಯಾಗಿ ಗ್ರಾಮಗಳಲ್ಲಿ, ವ್ಯವಸಾಯ, ನೆಯ್ಗೆ, ಇತರ ಕೈಗಾರಿಕೆಗಳು ಇವುಗಳ ಅಭಿವೃದ್ಧಿಗೆ ಸಹಾಯವಾಗುವವು ; ಆಗ ದೇಶೋದ್ಧಾರವಾಗುತ್ತದೆ ಇಷ್ಟೇ ಅಲ್ಲ ; ಹಾಗೆ ಮಾಡಿದಲ್ಲಿ ಈಗಿನಂತೆ ಒಬ್ಬಿಬ್ಬರು ಮಾತ್ರ ಐಶ್ವರ್ಯವಂತರಾಗುವುದಿಲ್ಲ, ಅನೇಕರು ಕಡುಬಡವರಾಗುವುದಿಲ್ಲ, ಅಶನ, ವಸನಗಳಿಗೆ ಇಲ್ಲವೆಂಬುವರ ಇಲ್ಲದೇ ಇರುವ ಕಾಲ ಬರುವದು; ಆಹಾರ ಪದಾರ್ಥಗಳಿಗಾಗಿ ಮಕ್ಕೊಬ್ಬರ ಅವಲಂಬನೆಯು ಬೇಕಾಗಿರುವದಿಲ್ಲ ; ಆದುದರಿಂದ ಸುಂಕ ರೂಪದಲ್ಲಿ ಹೆಚ್ಚು ಹಣವು ಕೈ ಬಿಟ್ಟು ಹೋಗಬೇಕಾಗುವ ಪ್ರಮೇಯವಿಲ್ಲ.

ಪ್ರ— ಪ್ರಾಣಿಗಳನ್ನು ಕೊಲ್ಲದಿದ್ದಲ್ಲಿ ಚರ್ಮವು ದೊರೆಯುವುದಿಲ್ಲ ; ಅದಕ್ಕಾಗಿ ಯಾದರೂ ಅವನ್ನು ಕೊಲ್ಲಲೇಬೇಕಷ್ಟೆ ?

ಉ— ಚರ್ಮವು ಕಡಮೆಯಾದಂತೆಲ್ಲಾ ಶಸ್ತ್ರವರ್ಗದಿಂದಲೇ ಅದಕ್ಕೆ ಪ್ರತಿಯಾಗಿ ಬೇರೊಂದು ಪದಾರ್ಥವು ತಯಾರಿಸಲ್ಪಟ್ಟು ಉಪಯೋಗಿಸಲ್ಪಡುವುದು ; ಇದಕ್ಕಾಗಿ ಗಾಬರಿಪಡಬೇಕಾಗಿಲ್ಲ : ಹಾಗೆಯೇ ಎಲುಬು, ಕೊಬ್ಬುಗಳ ವಿಷಯದಲ್ಲಿಯೂ ಅರಿಯತಕ್ಕದ್ದು.

ಎಲ್ಲರಿಗೂ ತಮ್ಮ ದೇಶವನ್ನೂ, ತಮ್ಮ ಜನಾಂಗವನ್ನೂ ಉಚ್ಚ ಸ್ಥಿತಿಗೆ ತರಬೇಕೆಂಬ ಬಯಕೆ ಇರುತ್ತದೆ ; ಆತ್ಮೋದ್ಧಾರದ ವಿನಃ ಯಾರೂ ಯಾರನ್ನೂ ಉದ್ಧಾರ ಮಾಡಲಾರರು : ಎಲ್ಲಾ ಉದ್ಧಾರಗಳಿಗಿಂತಲೂ ಪ್ರಪ್ರಥಮದಲ್ಲಿ ಆಹಾರ ವಿಷಯದಲ್ಲಿ ಬದಲಾವಣೆಯಾಗಬೇಕು : ಮಾಂಸಾಹಾರ ತ್ಯಾಗವಾಗಬೇಕು ; ಮೂಕ ಪ್ರಾಣಿಗಳ ರಕ್ಷಣೆಯಾಗಬೇಕು – ಓಂ

ಯುವಜನ ಮುಂದಾಗಲಿ

[ವಜ್ರಳ್ಳಿ ಗಣಪತಿ ಶರ್ಮಾ]

★

ಮಾನವ ಜೀವನದಲ್ಲಿ ಯೌವನವು ವಸಂತಕಾಲವೆನಿಸಿದೆ. ಯಾವ ಸಾಧನೆಯು ಹೂವರಳುವುದಾದರೂ, ಸಿದ್ಧಿಯ ಫರಿಮಳ ಹರಡುವುದಾದರೂ ಆಗಲೀ ಮನುಷ್ಯನ ಭವಿತವ್ಯದ ನಿರ್ಧಾರವಾಗುವುದು ಯೌವನದಲ್ಲಿ ; ಆಗ ಅವನ ಮುಂದೆ ಎರಡು ದಾರಿಗಳಿರುತ್ತವೆ : ಒಂದು, ಬದುಕನ್ನು ಹಸನಾಗಿಸಿಕೊಳ್ಳುವುದಾದರೆ ಇನ್ನೊಂದು, ಬದುಕನ್ನು ಬರಡುಮಾಡಿಕೊಳ್ಳುವದಾಗಿದೆ.

ಯೌವನದಲ್ಲಿ ಜೀವಿಯ ಪ್ರತಿಯೊಂದು ಅಂಗಾಂಗಗಳೂ ಸ್ಫುರಿಸುತ್ತವೆ, ಉತ್ತೇಜಿತವಾಗುತ್ತವೆ ; ಸ್ಫೂರ್ತಿಗೊಂಡು ಮಿಡಿಯುತ್ತವೆ. ಆಗ ಅವಕ್ಕೆ ಕೆಲಸಬೇಕು : ಸುಮ್ಮನಿರಲು ಸಾಧ್ಯವಾಗದು ; ಅದಕ್ಕಾಗಿ ಒಳ್ಳೆಯ ಕೆಲಸ ಸಿಕ್ಕರೆ, ತೋರಿದರೆ, ಒಳಿತು, ಇಲ್ಲವಾದರೆ ಅಕೃಪ್ತಿ. ಆಸೆ, ತಾನೇ ಕೆಲಸ ಹುಡುಕಿಕೊಳ್ಳುವುದು; ಹಾಗೇ ಅದೇ ಹುಡುಕಿಕೊಂಡಾಗ ಒಳಿತು. ಕೆಡಕುಗಳು ಅದರ ಗಣನೆಗೆ ಬರಲಾರದು. ಹೇಗಾದರೂ ತನ್ನ ಬಯಕೆಯನ್ನು ಈಡೇರಿಸಿಕೊಳ್ಳುವದೇ ಮುಖ್ಯವಾಗಿರುತ್ತದೆ.

ಈ ಯೌವನದ ವಸಂತ ಕಾಲ, ಪ್ರಾಣಿ ಮುಂತಾದ ಎಲ್ಲ ಜೀವಿಗಳಿಗೂ ಸಿಗುವ ಸಮಯವಾಗಿರುತ್ತದೆ : ಸುಸಮಯವಾದರೂ, ಅದನ್ನು ಸಾರ್ಥಕಗೊಳಿಸಿಕೊಳ್ಳುವದು ಮನಸ್ಸಿನಿಂದ ಮಾತ್ರ ಸಾಧ್ಯ. ಪ್ರಾಣಿಗಳಿಗಿಂತ ವಿಶಿಷ್ಟವಾದ ಶಕ್ತಿ ಮಾನವನಿಗೆ ಸೊತಿದೆ ; ಅದನ್ನು ಉಪಯೋಗಿಸುವ ರೀತಿಯಿಂದ ಅದರ ಪರಿಣಾಮ ಇವೆ, ಅಷ್ಟೆ

ಆದ್ದರಿಂದ ಮನುಷ್ಯ ಯೌವನದ ಆ ಮಧುರ ಕಾಲವನ್ನು ಸಾರ್ಥಕಗೊಳಿಸಿಕೊಳ್ಳಬೇಕಾದರೆ, ಅವನು ತನ್ನದಾದ ಕರ್ತವ್ಯ ಗುರಿಗಳನ್ನು ಮರೆಯಬಾರದು : ಏನಾದರೂ ಜೀವನದ ಆದರ್ಶ ಸಾಧನೆಯನ್ನು ಅದು ಮುಟ್ಟಬೇಕು : ಆ ಒಂದು ದಿಶೆಯಿಂದಲೇ ನಾವು ನನಗೆ ಯೋಗ್ಯವಾದುವುಗಳನ್ನು ಆರಿಸಿಕೊಳ್ಳಬೇಕು. ಆದರೆ ಯಾವುದೊಂದು ಗುರಿಯೂ ದೇಶರಕ್ಷಣೆಗೆ ಜೀವತುಂಬಬೇಕಾದ್ದಾಗಿರುವುದರ ಜೊತೆಗೆ, ರಾಷ್ಟ್ರಧರ್ಮಕ್ಕೆ ಪೂರಕವಾಗಿ ವ್ಯಕ್ತಿವಿಕಾಸಕ್ಕೆ ಅನುಕೂಲವಾಗಿರಬೇಕು ; ಅಂದಾಗಲೇ ನಮ್ಮ ದಾರಿ, ಸತ್ವಪೂರ್ಣವಾವೀತು.

ಹಿರಿಯರ ಹಿನ್ನೆಲೆಯಲ್ಲಿ ಸಿದ್ಧವಾದ ಯುವಜನಾಂಗದ ಸದೃಢಶಕ್ತಿಯೇ ನಿಜವಾಗಿಯೂ ರಾಷ್ಟ್ರದ ಜೀವಾಳ. ಶಾಂತಿ ಕ್ಷೇಮದ ಕನಸು ನನಸಾಗಬೇಕಾದರೆ ದೇಶಪ್ರೇಮದಿಂದ ಅಚಲವಾದ ತರುಣಶಕ್ತಿ ಕೆಲಸಮಾಡಬೇಕು. ಅಂತೆಯೇ, ಪ್ರಕೃತ ಭಾರತೀಯ ಯುವಜನಾಂಗದ ಮುಖ್ಯ ಕರ್ತವ್ಯಗಳಲ್ಲೊಂದಾದ " ಗೋಹತ್ಯ ನಿರ್ಮೂಲನ " ಶೀಘ್ರವೇ ಕೈಗೊಳ್ಳಬೇಕಾದ ಕಾರ್ಯ.

ರಾಷ್ಟ್ರಸುಖಕ್ಕೆ ಕಂಟಕವಾದ ಈ ಗೋಹತ್ಯೆ ಸಮೂಲವಾಗಿ ನಾಶವಾಗಬೇಕಾದರೆ, ಸಂಪೂರ್ಣವಾಗಿ ನಿಲ್ಲಬೇಕಾದರೆ, ರಾಷ್ಟ್ರದ ಯುವಜನಾಂಗ ಜಾಗ್ರತವಾಗಬೇಕು ; ಎಲ್ಲೆಡೆಯಲ್ಲಿಯೂ ತರುಣಶಕ್ತಿಯ ಪ್ರತಿಭಟನೆಯ ಕೂಗು, ಅತಃಶಕ್ತಿಯ ಕಿಡಿ ಹೊಮ್ಮಬೇಕು ; ಅದಕ್ಕಾಗಿ ಮಹಾಕ್ರಾಂತಿ ನಡೆಯಬೇಕು.

ಪ್ರಿಯ ಯುವಕ ಭ್ರಾತೃಗಳು, ಬಾಳನ್ನು ಹಾಳುಮಾಡಿಕೊಳ್ಳದೇ, ದೇಶಹಿತಕ್ಕೆ ಸಹಾಯಕವಾದ ಕಾರ್ಯಗಳಲ್ಲಿ ತಮ್ಮ ಅಮೂಲ್ಯವಾದ ಶಕ್ತಿಯನ್ನು ಉಪಯೋಗಿಸಿ, ನಿಜವಾಗಿಯೂ ಮಾನವತೆಯನ್ನು ಕಾಪಾಡಿಕೊಂಡು ಬಂದ ಶ್ರೇಯಸ್ಸನ್ನು ಪಡೆಯಲೆಂದೂ, ಜೀವನದ ಸಾರ್ಥಕತೆ ಆದಂತಾಗಲೆಂದೂ ಆಶಿಸುತ್ತೇವೆ.

ಯುವ ಜನಾಂಗ ನಮ್ಮ ರಾಷ್ಟ್ರಗಳ ಕೀಲು ; ಆ ಕೀಲು ಮುರಿಯಬಾರದು ಇನ್ನಷ್ಟು ಬಲಗೊಳ್ಳುತ್ತಾ ಹೋಗಬೇಕು. ಶಾಂತಿದಾಯಕವಾಗಬೇಕು : ಅದಕ್ಕೆ ಗೋಹತ್ಯಾಪ್ರತಿರೋಧವೇ ಮೊದಲಾದ ಪ್ರಾಣಿದಯೆ, ತ್ಯಾಗ ಸ್ನೇಹ ಮುಂತಾದ ಪವಿತ್ರ ಭಾವನೆಗಳ ದೀಕ್ಷ ನಮ್ಮಲ್ಲಾಗಬೇಕು

ಪ್ರಾಣಿದಯೆ ಮುಂತಾದವುಗಳು ನಿರ್ಜೀವ ಭಾವನೆಗಳೆಂದು ದಯವಿಟ್ಟು ತಿಳಿಯದಿರಿ : ಅದರಲ್ಲಿ ಎಂತಹ ಚೈತನ್ಯ ಅಡಗಿದೆ. ಎಂತಹ ಅಪಾರ ಶಕ್ತಿ ತುಂಬಿದೆ ! ಎಂಬುದನ್ನು ಒಮ್ಮೆ ಹೃದಯಂಗಮವಾಗಿ ಕಂಡುಕೊಳ್ಳಿ : ಭಾರತೀಯ ಸಂಸ್ಕೃತಿಯ ಉಚ್ಚವೇದಿಕೆಯ ಮೇಲೆ ನಿಂತು ನೋಡಿ : ಸಾಕು. ಆಗ ನವಭಾರತ ನಿರ್ಮಾಣವಾಗೀತು ; ಪುಣ್ಯ ದಿವ್ಯ ಸಂಸ್ಕೃತಿ ಭಾರತದಲ್ಲಿ ಬೆಳಗೀತು. ಆದರೆ ಇದಕ್ಕೆಲ್ಲಕ್ಕೂ ಯುವಜನಾಂಗ ಜಾಗ್ರತವಾಗಬೇಕು, ಮುಂದಾಗಬೇಕು ; ಹೀಗಾಗಲೆಂದು ಚೈತನ್ಯ ಘನನನ್ನಲ್ಲಿ ಪ್ರಾರ್ಥಿಸೋಣ.

— ಇತಿಶಮ್ —

ಗೋ ಮಾತಾ

[ಶಾಸ್ತ್ರಧರ್ಮನಿರತ ಅನಂತನರಸಿಂಹಯ್ಯಂಗಾರ್]

★

[ಮುಂದುವರಿದುದು]

ಬಡಜನರು ಹೊಸದಾಗಿ ಮನೆಕಟ್ಟುವಾಗ ಮಣ್ಣಿನ ಗೋಡೆ ಹಾಕುತ್ತಾರೆ ; ಅವುಗಳ ಮೇಲೆ ಗಾರೆ ಅಥವಾ ಸೀಮೆಂಟು ಬಳಿಯಲು ಅವರಿಗೆ ಚೈತನ್ಯವಿರುವುದಿಲ್ಲ; ಅವರು ಮಣ್ಣಿನ ಮೇಲೆ ಕೆಮ್ಮಣ್ಣು ಮತ್ತು ಮುರಳನ್ನು ಕಲೆಸಿ ಗೋಡೆಗೆ ಬಳಿಯುತ್ತಾರೆ ; ಆದರ ಮೇಲೆ ಸಗಣಿಯನ್ನು ಬಳಿಯುತ್ತಾರೆ ; ಆದರ ನಂತರ ಸುಣ್ಣವನ್ನು ಬಳಿಯುತ್ತಾರೆ : ಇದರಿಂದ ಗಾರೆಹಾಕಿದ ಗೋಡೆಯಂತೆಯೇ ಬಿಗಿಯಾಗಿಯೂ ಕಣ್ಣಿಗೆ ಅಂದವಾಗಿಯೂ ಕಾಣುತ್ತದೆ

ಇದುವರೆಗೆ ಆರ್ಥಿಕರೀತ್ಯಾ ವಿವೇಚಿಸಿ ಗೋಹತ್ಯೆಯನ್ನು ಪ್ರತಿಬಂಧಿಸುವುದರಿಂದ ರಾಷ್ಟ್ರಕ್ಕೆ ಅನುಕೂಲವಾಗುತ್ತದೆಂಬುದನ್ನು ಸ್ಥಿರಪಡಿಸಿರುತ್ತೇವೆ. ಗೋಹತ್ಯೆಗೆ ಇದೇ ರೀತಿಯ ಮುಕ್ತ ಅವಕಾಶವಿತ್ತರೆ ರಾಷ್ಟ್ರದ ಪರಿಸ್ಥಿತಿ ಏನಾಗುತ್ತದೆ ? ಎಂಬುದನ್ನು ವಿವೇಚಿಸೋಣ.

ರಾಷ್ಟ್ರದಲ್ಲಿರುವ ಹಸು ಮತ್ತು ಎತ್ತುಗಳ ಸಂಖ್ಯೆ ಅಪಾರವಾಗಿದೆ ಇಷ್ಟೊಂದು ಗೋವುಗಳನ್ನು ಸಾಕುವುದು ಅಸಾಧ್ಯವಾದುದೂ, ಅನಾವಶ್ಯಕವೂ ಆದುದೆಂದು ವಾದಿಸುತ್ತಾರೆ. ಆದರೆ ವಾಸ್ತವವಾಗಿ ಅಂಕಿಸಂಖ್ಯೆ ಇಲಾಖೆಯಲ್ಲಿರುವ ಸಂಖ್ಯೆಗೂ, ವಾಸ್ತವವಾಗಿರುವ ಗೋವುಗಳ ಸಂಖ್ಯೆಗೂ ಬಹಳ ವ್ಯತ್ಯಾಸವಿದೆ ; ಇದಕ್ಕೆ ಕಾರಣವೆಂದರೆ ೫ ವರ್ಷಕ್ಕೊಮ್ಮೆ ನಡೆಸುವ ಜಾನುವಾರು ಗಣತಿಯಲ್ಲಿ ಕೆಲವರು ಪ್ರತಿಯೊಂದು ಮನೆಗೂ ಹೋಗಿ ಸರಿಯಾದ ಸಂಖ್ಯೆಯನ್ನು ತಿಳಿಯುವುದಿಲ್ಲ ; ಕೆಲವು ಕಡೆ ಗಣತಿ ನಡೆಸುವವರು ಹೋದಾಗ ಆ ಸಮಯದಲ್ಲಿ ರೈತರು ಮನೆಯಲ್ಲಿರುವುದಿಲ್ಲ ; ಇನ್ನು ಕೆಲವು ಕಡೆ ಅಜ್ಞಾನದಿಂದ ಸರಿಯಾದ ಅಂಕಿಸಂಖ್ಯೆಗಳನ್ನು ಹೇಳುವುದಿಲ್ಲ ; ಇದರಿಂದ ಸರಿಯಾದ ಅಂಕಿಯನ್ನು ಪಡೆಯಲು ಸಾಧ್ಯವಾಗಿಲ್ಲ. ಸರಕಾರದವರು ಹೇಳುತ್ತಿರುವ ಸಂಖ್ಯೆಗಿಂತ ಬಹಳ ಕಡಮೆ ಸಂಖ್ಯೆಯಲ್ಲಿ ಗೋವುಗಳು ಇರಬೇಕೆಂಬುದು ನಮ್ಮ ಊಹೆಯಾಗಿರುತ್ತೆ. ಆದರಿಂದಲೇ ಜವಿಾನುಗಳನ್ನು ಉಳಲು ಮತ್ತು ಗಾಡಿಗಳನ್ನು ಎಳೆಯಲು ಸಾಕಷ್ಟು ಎತ್ತುಗಳು ಈಗಲೇ ಇಲ್ಲವೆಂದು ಕಂಡು ಬರುತ್ತದೆ.

ನಿರುಪಯೋಗಿ ಎಂಬುದಾಗಿ ಹೇಳುವ ಎತ್ತುಗಳಲ್ಲದೆ ಪ್ರಾಯಸಮರ್ಥವಾದ ಹಾಗೂ ಉಪಯೋಗಕ್ಕೆ ಬರುತ್ತಿರುವ ಎತ್ತುಗಳನ್ನೂ, ಗರ್ಭಧರಿಸಿರುವ ಹಸುಗಳನ್ನೂ ಸಮಯಸಿಕ್ಕಾಗ ಕದ್ದುಹೊಡೆದುಕೊಂಡುಹೋಗಿ ಕುಯ್ಯುವವರೂ ಇದ್ದು ಎತ್ತುಗಳ ಕಳ್ಳತನವಾದ ಸುದಿಗಳು ಕೇಳಿಬರುತ್ತಿವೆ. 1971 ನೇ ವರ್ಷದ ಲೋಕಸಭಾ ಚುನಾವಣೆಗಳು ನಡೆದನಂತರ ಗೋಹತ್ಯೆಯು ಹೆಚ್ಚಿದೆಯೆಂಬ ಸಮಾಚಾರವನ್ನು ಕೇಳುತ್ತೇವೆ. ಇದರಿಂದ ಗೋವಂಶದ ಸಂಖ್ಯೆ ಕ್ಷೀಣಿಸುತ್ತಿದ್ದು ವ್ಯವಸಾಯಕ್ಕೆ ತುಂಬಾ ತೊಂದರೆಯುಂಟಾಗುತ್ತದೆ ಹಸುಗಳನ್ನೂ ಸಹ ಉಳಲು ಉಪಯೋಗಿಸುತ್ತಿರುವುದರಿಂದ ಹಸುವಿನ ಹಾಲು ಮತ್ತು ಹಸುವಿನ ತುಪ್ಪ ತುಂಬಾ ಅಪರೂಪವಾಗಿದೆ. ಇದರಿಂದ ಅನೇಕ ಆಯುರ್ವೇದ ಔಷಧಿಗಳನ್ನು ತಯಾರಿಸಲು ತೊಂದರೆಯಾಗಿದೆ. ಅನೇಕ ಮಕ್ಕಳು ಹಸುವಿನ ಹಾಲು ದೊರಕದ ಕಾರಣ ನಾನಾ ರೋಗಗಳಿಗೆ ತುತ್ತಾಗಿ ಸಾಯುತ್ತಿವೆ. ಹಾಲಿಗೋಸ್ಕರ ಹಸುಗಳನ್ನು ಸಾಕುತ್ತಿರುವವರ ಸಂಖ್ಯೆ ಬಹಳ ಕಮ್ಮಿಯಾಗುತ್ತಿದೆ. ಹಸುಗಳನ್ನು ದೇವತಾ ಪ್ರತೀತವೆಂದು ಭಾವಿಸಿ ಸಾಕುತ್ತಿರುವವರ ಸಂಖ್ಯೆಯಂತೂ ತೀರಾ ಅಪರೂಪವಾಗಿದೆ. ತಕ್ಷಣದಲ್ಲೇ ಗೋಹತ್ಯೆ ನಿಷೇಪವಾಗದಿದ್ದರೆ, ವ್ಯವಸಾಯಕ್ಕೂ, ಜನರ ಆರೋಗ್ಯಕ್ಕೂ ಅತಿ ಹಾನಿ ಉಂಟಾಗುವುದರಲ್ಲಿ ಸಂದೇಹವಿಲ್ಲ.

ಸ್ವಾತಂತ್ರ್ಯ ಬಂದಾಗಿನಿಂದ ಗೋಹತ್ಯೆಯನ್ನು ನಿಷೇಧಿಸಬೇಕೆಂದು ಚಳವಳಿಗಳು ನಡೆಯುತ್ತಲೇ ಇವೆ. ಸರ್ಕಾರದ ಗಮನಕ್ಕೆ ತರಲು ಕೋಟ್ಯಾಂತರ ಜನರು ಸಹಿಮಾಡಿದ ಮನವಿಗಳನ್ನು ಅರ್ಪಿಸಲಾಗಿದೆ. ಏಳು ಲಕ್ಷ ಜನರು ದೆಹಲಿಯಲ್ಲಿ ಲೋಕಸಭಾ ಭವನದ ಪರಿಸರ ಹೋಗಿ ಸರಕಾರದ ಗಮನ ಸೆಳೆದಿದ್ದಾರೆ. ಪೂರಿ ಜಗದ್ಗುರು ಶಂಕರಾಚಾರ್ಯರು ಎಪ್ಪತ್ತಮೂರು ದಿವಸಗಳವರೆಗೆ ಉಪವಾಸ ಮಾಡಿದ್ದಾರೆ. ಲೌಕಿಕ ವ್ಯವಹಾರಗಳನ್ನು ಸಂಪೂರ್ಣ ತ್ಯಜಿಸಿ ಲೋಕಕಲ್ಯಾಣಕ್ಕಾಗಿ ತಪಸ್ಸು ಮಾಡುತ್ತಿದ್ದ ಅನೇಕ ಸಾಧುಸಂತರು ಸನ್ಯಾಸಿಗಳು ಸೆರೆಮನೆ ಸೇರಿ, ಲಾಠಿ ಏಟು ತಿಂದು, ಗೋಳಿಬಾರಿನಲ್ಲಿ ಪ್ರಾಣವನ್ನೂ ಕಳೆದುಕೊಂಡಿದ್ದಾರೆ. ಇಷ್ಟಾದರೂ ಗೋಹತ್ಯೆ ನಿಷೇಧವಾಗಲಿಲ್ಲ ಏಕೆ ? ಎಂಬ ವಿಚಾರವನ್ನು ಪರಿಶೀಲಿಸೋಣ.

[ಮುಂದುವರಿಯುವುದು

Kannada version of Syt J. Dalmiaji's Article –
" Were Cows slaughtered at King Ranti Deva's Place ? "

" ರಾಜಾ ರಂತೀದೇವ್‌ರವರ ಸ್ಥಳದಲ್ಲಿ ಗೋಹತ್ಯೆ ಮಾಡಲ್ಪಡುತ್ತಿತ್ತೆ ? "

★

[ಮುಂದುವರಿದುದು]

ಪ್ರಾಣಿಗಳು ತನ್ನಷ್ಟಕ್ಕೆ ತಾನೇ ಬರುವ ಉದ್ದೇಶವು, ಪ್ರೀತಿಸಲೂ ಪ್ರೀತಿಸಲ್ಪಡಲು ಆಗಿದೆ. ಜನರು ಯಜ್ಞಕ್ಕೆ ಹೋಗುತ್ತಿದ್ದರೂ, ಹಾಲಿನಿಂದ ಸೇವಿಸಲೂ ಅಥವಾ ಇತರ ಉತ್ಪನ್ನಗಳಿಗಾಗಿಯಾದರೂ ಮಾಡಲೂ ಆಗಿರುತ್ತೆ. ನಂತರ ರಾಜಾ ರಂತೀದೇವನ ದಾನಗಳೂ ವಿವರಿಸಲ್ಪಟ್ಟಿವೆ. ಇದರಿಂದ ರಾಜಾ ರಂತೀದೇವನ ಯಜ್ಞದಲ್ಲಿ ಜೀವಿಗಳನ್ನು ದಾನಾ ಮಾಡುತ್ತಿದ್ದನೆಂದೂ ಗೊತ್ತಾಗುವುದು. ದಾನ ಪಡೆಯಲು ಜನರು ಬಂದಿದ್ದರು. ಈ ಪ್ರಾಣಿಗಳು ಚೆನ್ನಾಗಿ ತೊಳೆಯಲ್ಪಟ್ಟು ಶುಚಿಗೊಳಿಸಲು ಸ್ನಾನ ಮಾಡಿಸಿ, ಅಲಂಕಾರದಿಂದ ಸುಂದರಗೊಳಿಸಲ್ಪಡುತ್ತಿದ್ದವು. ಅವುಗಳ ಚರ್ಮವನ್ನು ತೊಳೆಯಲು ಉಪಯೋಗಿಸಲ್ಪಡುತ್ತಿದ್ದ ನೀರು, ದೊಡ್ಡ ಪರಿಣಾಮದಲ್ಲಿ ಹರಿಯುತ್ತಿದ್ದು, ಚರ್ಮಾವತಿ (ಚಂಬಾಲ್) ಎಂದು ಪ್ರಖ್ಯಾತಗೊಂಡ ನದಿಯ ರೂಪು ತಾಳಿರಬಹುದು.

ರಾಹುಲ ಸಂಕೀರ್ತಿಯಾರ್ಯ ಕೊಟ್ಟಿರುವ ವಿವರವೇನೆಂದರೆ, ಅಡಿಗೆಮನೆಯಲ್ಲಿ ಗೋವುಗಳು ಕೊಲ್ಲಲ್ಪಡುತ್ತಿದ್ದು, ಅವುಗಳ ಮಾಂಸ ಬೇಯಿಸಲ್ಪಡುತ್ತಿದ್ದು, ಆ ಮೃತ ಚರ್ಮವ ಉಳ್ಳಿ ದಾಸ್ತಾನು ಮಾಡಲಾಗುತ್ತಿದ್ದು ಈ ಚರ್ಮಗಳಿಂದ ಹೊರುತ್ತಿದ್ದ ನೀರು ನದಿ ಸೇರಿ ನದಿ ಹೀಗೆ ಪರಿಣಮಿಸಿದೆ ಎಂಬುದಾಗಿದೆ. ಪ್ರಥಮವಾದವು, ಗೋವಧೆ ನಿಷೇಧವನ್ನೂ ಕೂಡ ಅಡಿಗೆಮನೆಯಲ್ಲಿ ಹಸುಗಳನ್ನು ಕೊಲ್ಲುವುದಿಲ್ಲ ಅವರು ಅಡಿಗೆ ಮನೆಯಲ್ಲಿ ಚರ್ಮವನ್ನು ದಾಸ್ತಾನು ಮಾಡುವುದೂ ಇಲ್ಲವಾಗಿದೆ. ಎರಡನೇಯದಕ್ಕೆ ಚರ್ಮದಿಂದ ಹೊರುವ ನೀರು, ನದಿಯ ಆಕಾರ ತೆಗೆದುಕೊಳ್ಳುವಷ್ಟು ಪರಿಣಾಮಕಾರಿಯಾಗಿರಲಾರದು. ಆದುದರಿಂದ, ರಾಹುಲ ಸಂಕೀರ್ತ್ಯಾಯನ್ನರ ಅಭಿಪ್ರಾಯವನ್ನು ಒಪ್ಪಿಕೊಳ್ಳಲಾಗುವುದಿಲ್ಲವಾಗಿದೆ. ಪೂರ್ಣ ವಿವರದ ಸಂದರ್ಭವನ್ನು ಪರಾಮರ್ಶಿಸಿದರೆ, ಸ್ವಇಚ್ಛೆಯಿಂದ ಬರುತ್ತಿದ್ದ ಪ್ರಾಣಿಗಳನ್ನು ದಾನಕ್ಕೆ ಕೊಡುವದಕ್ಕೆ ಮುಂಚೆ ಚೆನ್ನಾಗಿ ತೊಳೆದು, ಸ್ನಾನ ಮಾಡಿಸಲ್ಪಡುತ್ತಿದ್ದು, ಆ ಜೀವಿತ ಪ್ರಾಣಿಗಳನ್ನು ತೊಳೆದ ಆ ನೀರು ನದಿಯ ಆಕಾರ ಪಡೆದಿರಬೇಕು ಮತ್ತು ಅದು ಚರ್ಮಾವತಿ ಎಂದು ಕರೆಯಲ್ಪಟ್ಟಿರಬೇಕು. ಇದು ಅಲ್ಲಿಗೆ ಸಂದರ್ಭಕ್ಕೆ ಹೆಚ್ಚು ಅನುಸರಣೀಯವಾಗಿದೆ.

ಶ್ರೀ ಪುಣೀರಕುಮಾರ ಗುಪ್ತರು, ಪ್ರಖ್ಯಾತ ಕವಿ ಕಾಳಿದಾಸನ ಮೇಘದೂತವನ್ನು, ಮಲ್ಲೀನಾಥರ ಸಮಾಲೋಚನೆಯೊಡನೆ ಸಂಪಾದಿಸಿರುವರು, ಮತ್ತು ವಿವರವಾದ ಟೀಕೆಟಿಪ್ಪಣಿಯೊಡನೆ ಪದೇಶಃ ಹಿಂದಿ ಭಾಷಾಂತರ ಕೊಟ್ಟಿರುವರು ಅವರ ಟಿಪ್ಪಣಿಯಲ್ಲಿ, ಪೂರ್ವ ಮೇಘದ 49 ನೇ ಪದ್ಯದಲ್ಲಿ, ರಾಜಾ ರಂತೀದೇವನ ಕೀರ್ತಿಗೆ ಸಂಬಂಧಿಸಿದಂತೆ, ಅವರು ಕೊಟ್ಟಿರುವುದರ ಇಂಗ್ಲೀಷು ಭಾಷಾಂತರದ ಅನುವಾದವನ್ನು ಕೆಳಗೆ ಕೊಡಲಾಗಿದೆ —

' ತಾಂಡ್ಯ–ಬ್ರಾಹ್ಮಣ 19 13 1 ರಲ್ಲಿ ಗೋಪವಕ್ತುಃ ಎಂಬ ಪದವು ಆರ್ಷೇಯ ಗೋಪವಃ ಸ್ವಾರಾಜ್ಯೋ ಯಜ್ಞಃ ಎಂದು ವಿವರಿಸಲಾಗಿದೆ ; 'ರಂತೀದೇವ' ಎಂಬ ಪದದ ಅರ್ಥವು, ರಂತಿಃ ರಮಣಂ ದೇವಾನಾಂ ಯಸ್ಮಿನ್ ಸಃ ಅಂದರೆ ವಿದ್ವಾಂಸರು ಆನಂದಗೊಳಿಸುವಂಥವನು, ಅಥವಾ, ವಿದ್ವಾಂಸರನ್ನು ಸಂತೋಷಗೊಳಿಸುವ, ತನ್ಮೂಲಕ ಅವರಿಂದ ಗೌರವಿಸಲ್ಪಡುವವನು ಎಂದಾಗಿದೆ. ರಂತೀ ಎಂಬ ಪದವು ಯಜುರ್ವೇದ 22 19 ರಲ್ಲಿ (ಶತಪಥ ಬ್ರಾಹ್ಮಣ 13.1.6.2 ನೋಡಿ) ಇದೇ ಅರ್ಥ ಬರುವಿದೆ ಆದ್ದರಿಂದ, ದೇವತೆಗಳಿಂದ ಗೌರವಿಸಲ್ಪಡುವ ವೀರ ರಂತೀದೇವದ ಸುರಭಿತಸಯಾಲಾಭ ಯಜ್ಞವು, ತನ್ನ ಆಧಿಪತ್ಯದ ರಕ್ಷಣೆಯಲ್ಲದೆ ಮತ್ತೇನೂ ಅಲ್ಲ ಚರ್ಮಾವತಿ ನದಿಯು ಆತನ ಕೀರ್ತಿಯನ್ನು ಗುರುತಿಸುತ್ತದೆ. ಅದರ ದಡಗಳು ರಾಜನ ಔದಾರ್ಯ, ವಿದ್ವತ್‌ಪ್ರೇಮ, ವೀರತ್ವ, ಪ್ರಜಾಕಲ್ಯಾಣದಲ್ಲಿನ ಅಸಕ್ತಿಗಳ ಸಾಕ್ಷ್ಯಗಳಾಗಿವೆ ಚರ್ಮಾವತಿ ಪದವು ಚರ್ಮ–ವತ್–ಇ ಇಂದಾಗಿದೆ. ಯುನ್ನಾದಿ ಕೋಶ 4 115 (ಋಷಿದಯಾನಂದರ ವ್ಯಾಖ್ಯಾನ, ಅಜ್ಮೀರ್ ವಿಕ್ರಮ ಶಕ 1988) ರಂತೆ, ಚರ್ಮಾಣಿ ಅರ್ಥವು, ಚರತಿ ಗಚ್ಛತಿ ಯೇನ ತತ್ ಚರ್ಮ, ಅಂದರೆ ಒಬ್ಬನು ಕೀರ್ತಿಯ ಕಡೆಗೆ ಹೋಗುವ ಅಥವಾ ಪಡೆಯುವದು ಎಂದಾಗಿದೆ. ಆದ್ದರಿಂದ ರಂತೀದೇವನ ಕೀರ್ತಿಯನ್ನು ಸೂಚಿಸುವುದಾದ್ದರಿಂದ ಅದ ಚರ್ಮಾವತಿ ಎಂಬ ಹೆಸರಿನಿಂದ ಕರೆಯಲಾಗಿದೆ.

(ಮುಂದುವರಿಯುವುದು)

How to Save the Cow ?

(Sri C. P. Kedia — Godarsan)

★

The anti-cow-slaughter movement has been persistant in India. There is, also, however another persistancy about it—the persistancy of failure, either to influence the government in right direction or to organise force strong enough to oust the Government. This is a sad commentary on a movement the aims of which are so noble, the backing for which is claimed on a universal scale and yearning for the success of which is so insistent.

The first and foremost thing to be remembered is that while the masses can afford to be sentimental on the issue, the organiser of the movement cannot. Emotion, of course, is the driving force of all noble movements in history, yet the organisers have to be cool-headed, calculating and calm types. How it is so, has bee described briefly.

To begin with, the organiser so far are not clear in their objectives themselves. It, of course, is true, that they want a ban on on cow-slaughter but they forget to get such a ban implemented, the government has either to be influened or ousted. They are prone to repeat that their movement is not political. However, the movement has to be political. Let the position be stated clearly. If need arise the movement has to be directed toward restoring the power-balance in favour of a coterie which is in favour of a ban on cow-slaughter.

To imagine that the government does not realise the value of cow-protection will be irratioal o the part of the movement. The more rational view to take will be that for reasons of its own : the government has a stake in continuation of cow slaughter and will not be averse to to take the most political advantage of it in the give situation of power-balance in India.

Any appeal or plea for mercy or humanirarism is bound to fall on deaf ears The movement has to accept the notion that the government has a vested interest in slaughter and is a willing, rather insistant party to such a slaughter. Hence, it cannot be an impartial judge in the matter. Rather, it is the case of one entity being the criminal, the prosecutor and the judge, all combined in one. [To be continued

GORAKSHANA

(Statement of Ownership)

Place of publication	Mysore
Periodicity of its publication	Monthly
Name, Nationality and address of the Printer, Publisher, Editor and owner of the Newspaper	M.S Krisna Rao, Indian 1067 Chamarajapuram Mysore 4.

I. M. S. Krishna Rao, hereby declare that the particulars given above are true to the best of my knowledge and belief.

20–2–1972 M. S. Krishna Rao

Turning the Wheel of Happiness

DALMIA CEMENT (BHARAT) LIMITED

Dalmiapuram P.O., Tiruchirapalli Distt.
(Tamil Nadu)

Manufacturers of

'ROCKFORT' BRAND

DALMIA Portland Cement

ALSO

Mine-Owners & Suppliers of High Grade Iron Ore for Export

H. O: 4 Scindia House, New Delhi - 1.

Help The Gorakshana

— Humanitari n Propoganda Monthly ....



Protect the Cow

ಅದ್ಭುತ ಗಡಿಯಾರ

ಕೋವರ್ ಹೇಗನ್ (ಡೆನ್ಮಾರ್ಕ್) ನಲ್ಲಿರುವ ಭಾರಿ ಗಡಿಯಾರದ ಒಂದು ಚಕ್ರ ಒಂದು ಸುತ್ತು ಬರಲು 25,700 ವರ್ಷ ಬೇಕು ; ಇಬರಲ್ಲಿ 15000 ಬಿಡಿ ಭಾಗಗಳವೆ. ಈ ಗಡಿಯಾರದಲ್ಲಿ 570000 ವರ್ಷಗಳ ಕ್ಯಾಲೆಂಡರು ಇದ್ದು, ಮುಂದಿನ 4 ಸಾವಿರ ವರ್ಷಗಳ ಸೂರ್ಯ ಗ್ರಹಣ ಚಂದ್ರಗ್ರಹಣಗಳನ್ನೂ; ತಾರೀಖಿನ ವಾರಗಳನ್ನೂ; ಹವಾಮಾನ, ಹಬ್ಬ, ಜಗತ್ತಿನ ವಿವಿಧ ಭಾಗಗಳ ಕಾಲಮಾನಗಳನ್ನೂ ತಿಳಿಯಬಹುದು; ಇದನ್ನು ಜೇನ್ಸ್ ಓಲ್ಸೆ ಎಂಬಾತ 40 ವರ್ಷಗಳಲ್ಲಿ ತಯಾರಿಸಿದನು :1 5-12-1955ರಲ್ಲಿ ಡೆನ್ಮಾರ್ಕಿನ 9 ನೇ ಫ್ರೆಡ್ರಿಕ್ ಇದರ ಪ್ರಾರಂಭೋತ್ಸವವನ್ನು ನೆರವೇರಿಸಿದನು.

*

5000 ಮಿಲಿಯ ಜನ ಪ್ರೇಕ್ಷಕರು

ಸೋವಿಯತ್ ಚಲಚಿತ್ರ ಸ್ಟೂಡಿಯೋಗಳು 1971 ರಲ್ಲಿ 100 ಕ್ಕೂ ಹೆಚ್ಚು ಚಿತ್ರಗಳನ್ನು ಬಿಡುಗಡೆ ಮಾಡಿದ್ದು 5000 ಮಿಲಿಯ ಜನ ಪ್ರೇಕ್ಷಕರು ಅವುಗಳನ್ನು ನೋಡಿದ್ದಾರೆ; ದ್ವಿತೀಯ ಜಾಗತಿಕ ಯುದ್ಧದ ಮುಕ್ತಾಯ ಕಾಲಕ್ಕೆ ಸಂಬಂಧಪಟ್ಟ "ಲಿಬರೇಷ್ಯ" ಎಂಬ ಚಲಚ್ಚಿತ್ರ ಮಾಲೆಯ ಚಿತ್ರೀಕರಣವು ಸಂಪೂರ್ಣಗೊಂಡಿದೆ. 100 ಕ್ಕೂ ಹೆಚ್ಚು ದೇಶಗಳು ಈ ಚಿತ್ರವನ್ನು ಕೊಂಡಿವೆ.

Contribute Liberally to the National Defence Fund

ವುಡ್‌ಲ್ಯಾಂಡ್ 17-3-72 ರಿಂದ ಆವೋಫ 4 ನೇ ವಾರ

ಧರ್ಮೇಂದ್ರ, ಜಯಬಾಧುರಿ ಅಭಿನಯಿಸಿರುವ ಹೃಷಿಕೇಶ್ ಮುಖರ್ಜಿಯವರ ವರ್ಣರಂಜಿತ ಹಿಂದಿ ಚಿತ್ರ

ಗುಡ್ಡಿ

ಅಪೆರಾ 24 3 72 ರಿಂದ

ಈಸ್ಟ್‌ಮನ್ ಕಲರ್ ಹಿಂದಿ ಚಿತ್ರ

ನಾದಾನ್

Edited Printedand Published by Dharmapracharanirata M S Krishna Rao (Propretor) at the Satvavadi Press Chamarajapuram Mysore 4